ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಸರ್, ಮೀಟರ್ ಬಡ್ಡಿ ಅಂದ್ರೇನು?*
ವಸೂಲಿ ಮಾಡಲು ಮೀಟರ್ ಇರುವವರು ಮಾತ್ರ ತೊಡಿಸುವ ಬಡ್ಡಿ.



ಮೇಘನಾ ವಚನೇಶ್ವರಿ, ಹೆಬ್ಬಳ್ಳಿ
*ಮೋದಿಯವರು ನಿಜವಾದ ರಾಷ್ಟ್ರಪುರುಷ ಅಷ್ಟೇ ಅಲ್ಲ, ವಿಶ್ವಪುರುಷ. ಏನಂತೀರಿ?*
ಅರ್ಧ ಒಪ್ಪುತ್ತೇನೆ. ಉತ್ತರಾರ್ಧ ಸಂಪೂರ್ಣ ಸತ್ಯ ಎನ್ನುವುದಕ್ಕೆ ಗಡ್ಡವೇ ಸಾಕ್ಷಿ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ನಗಿಸುವುದಕ್ಕೂ, ನಗೆಪಾಟಲಾಗುವುದಕ್ಕೂ ಸಾಮ್ಯತೆ, ವ್ಯತ್ಯಾಸಗಳು ಏನು ಸಾರ್?*
ನಗೆಯುಕ್ಕುವುದೊಂದೇ ಸಾಮ್ಯತೆ;
ನಗಿಸುವುದು ಆತ್ಮೀಯ ಕಲೆ;
ನಗೆಪಾಟಲಾಗುವುದು ಆತ್ಮದ ಕೊಲೆ.

ವಿ. ಹಮೀದ್, ವಿಟ್ಲ
*ಚೂಟಿ ಹುಡುಗ ಪೆದ್ದು ಹುಡುಗಿಯನ್ನು ವರಿಸಿದರೆ ಏನಾದೀತು ಸಾರ್?*
ಚೂಟಿ ಮಗಳು, ಪೆದ್ದು ಮಗನ ಜನನ.

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ
*ಲೋಹಗಳಲ್ಲಿ ಅತ್ಯಂತ ಭಾರವಾದ ಲೋಹ ಯಾವುದು?*



ಕ್ಷಮಿಸಿ; ಅತ್ಯಂತ ಭಾರವಾದುದು ಲೋಹವಲ್ಲ, ಮೋಹ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಯಕ್ಷಪ್ರಶ್ನೆಗೂ, ನೀವು ಕೇಳಿದಿರಿಗೂ ಇರುವ ವ್ಯತ್ಯಾಸವೇನು?*
ಯಕ್ಷಪ್ರಶ್ನೆಗೆ ನಗುವವರೂ ಗಂಭೀರ; ನೀವು ಕೇಳಿದಿರಿಗೆ ಗಂಭೀರವದನದಲ್ಲೂ ನಸುನಗೆ.

ಪೇಂಟರ್ ಪಾಪು, ಸಂತೇಮರಹಳ್ಳಿ
*ಮನುಷ್ಯ ಸತ್ತ ಕೂಡಲೆ ಯಾಕೆ ಯಾರೂ ಸಂತೋಷ ಪಡುವುದಿಲ್ಲ?*
'ನಿಮ್ಮ ಸಂತೋಷವನ್ನು ಸಂಭ್ರಮದಿಂದ ಆಚರಿಸಲು ನೀವೇ ಉತ್ತರಕ್ರಿಯೆಯ ಖರ್ಚು ವಹಿಸಿ' ಎಂದಾರೆಂಬ ಭಯ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಸರ್ವಜ್ಞನ ಪ್ರಕಾರ ಗಿಡ್ಡ ಹೆಂಡತಿ ಲೇಸು. ಏಕೆ ಸಾರ್?*
ಗಿಡ್ಡಿಯ ಎತ್ತರ, ಲೇಸಿನ ಉದ್ದ ಹೋಲಿಸಿದ ಉಪಮಾಲಂಕಾರ. ಶೂ ಲೇಸುಗಳ ಅಳತೆ ಕನಿಷ್ಠ 36", ಗರಿಷ್ಠ 60".

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
*ಜಗತ್ತು ಒಂದೇ ಇದ್ದರೂ ಜಗದ್ಗುರುಗಳು ಮಾತ್ರ ಲೆಕ್ಕವಿಲ್ಲದಷ್ಟು ಇದ್ದಾರಲ್ಲಾ...?*
ಲೆಕ್ಕವೊಂದೇ, ಲೆಕ್ಚರರ್‌ಗಳು ಸಾವಿರಾರು ಇಲ್ಲವೇ; ಇದೂ ಹಾಗೆಯೇ.

ಡಾ.ವಿ.ಪುಗಳೇಂದಿ, ಬಳ್ಳಾರಿ
*ಕೆಂಪೇಗೌಡರು ದಿಢೀರೆಂದು ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪ್ರತ್ಯಕ್ಷವಾದರೆ...?*
ಬೆಂಗಳೂರಿನ ಅವಸ್ಥೆ ಕಂಡು ಕೂಡಲೆ ಮಾಗಡಿ ಬಸ್ ಏರಿ ಹೊರಟುಬಿಡುತ್ತಾರೆ.

ಕೆ.ಯಂ.ವೀರೇಶ್, ಕೂಡ್ಲಿಗಿ
*ಹೋಮ, ಹವನಗಳನ್ನು ಮಾಡಿದ ಗೌಡರ ಪಕ್ಷ ಈಗ ಏನಾಗಿದೆ?*
ಪೂರ್ಣಾಹುತಿ ಆಗುವ ಹಂತ ತಲುಪಿದೆ.

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*'ಸೀತಾ' ಎಂಬ ನಿಮ್ಮ ಹೆಸರನ್ನು 'ರಾಮ್' ಎಂದು ಬದಲಾಯಿಸಿಕೊಂಡಿರುವುದೇಕೆ?*
ಸೀತ (ಶೀತ) ಕಡಿಮೆ ಆಗಿ ಈಗ ಆರಾಮ್ ಆಗಿರುವುದರಿಂದ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ವರ್ಗಾವಣೆಗೆ 'ಎತ್ತಂಗಡಿ' ಅನ್ನೋದೇಕೆ?*
ಎತ್ತಂಗಡಿ = ಎತ್ತ(ಲೋ)+ತಂಗು(ವುದಕ್ಕೆ)+ಅಡಿ(=ಮೂಲ); worry ಸಮಾಸ.

ಮೋಹನರಾಜು ಎಸ್.ಎ., ಶಿವಮೊಗ್ಗ
*ಎರಡು ಕೈ ಸೇರಿದರೆ ಚಪ್ಪಾಳೆ. ಎರಡು ಜಡೆ ಸೇರಿದರೆ?*
ಮಧ್ಯ ಸಿಲುಕಿದ ಗಂಡು ಅಪ್ಪಾಳೆ ತಿಪ್ಪಾಳೆ.
ರಂಗಯ್ಯ, ದೇವದುರ್ಗ

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಚಲಿಸುವ ಕಾಲವನ್ನು ತಡೆಯುವಂತಿದ್ದರೆ?*
ಅಬ್ಬ! ಬ್ರೇಕಿಂಗ್ ನ್ಯೂಸ್ ಹಾವಳಿಗಳನ್ನು ತಪ್ಪಿಸಬಹುದಿತ್ತು!

*ಅಂದಿನ ವಿದ್ಯೆ ಕಲಿಸುವ ಗುರುಕುಲಗಳಿಗೂ, ಇಂದಿನ ವಿದ್ಯಾಲಯಗಳಿಗೂ ಇರುವ ವ್ಯತ್ಯಾಸ?*
ಅಲ್ಲಿ ಶುಕ್ಲಾಂಬರಧರಂ... ಮೊರೆತ; ಇಲ್ಲಿ ಶುಲ್ಕದ ದರದರ ಸೆಳೆತ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಹುಡುಗಿಯರು ಬಾರ್ ಹತ್ರ ಹೋಗಬಾರದು, ಹುಡುಗರು ಬ್ಯೂಟಿ ಪಾರ್ಲರ್ ಹತ್ರ ಹೋಗಬಾರದು. ಯಾಕೆ?*
ಬಣ್ಣ ಬಯಲಾಗುತ್ತಲ್ಲ!
ಬೂಕನಕೆರೆ ವಿಜೇಂದ್ರ, ಮೈಸೂರು

ಮಲ್ಲನಗೌಡ ಪಾಟೀಲ, ರಾಮದುರ್ಗ
*ಕಲ್ಲನಾಗರಕ್ಕೆ ಕೈ ಮುಗಿಯುವವರು ಜೀವಂತ ನಾಗರವನ್ನು ಕಂಡರೆ ಕಲ್ಲಿನಿಂದ ಜಜ್ಜಿ ಸಾಯಿಸುವುದೇಕೆ?*



ಪ್ರವಾಹದ ಚಿತ್ರ ನೋಡಿ ಮೆಚ್ಚುವುದು, ಪ್ರವಾಹವನ್ನೇ ಕಂಡಾಗ ಬೆಚ್ಚುವುದು ವಿವೇಚನೆಯ ಲಕ್ಷಣ.

*ಇಲ್ಲೊಬ್ಬಳು ಅತ್ತೆ ಸತ್ತ ಆರು ತಿಂಗಳ ನಂತರ ಅಳುತ್ತಿದ್ದಾಳಲ್ಲಾ...?*
ವಕೀಲರು ನೆನ್ನೆ ವಿಲ್ ಓದಿದರಂತೆ. ಅತ್ತೆ ಹೇಳಿದಂತೆ ಮಾಡದೆ ಎಲ್ಲ ಒಡವೆಗಳನ್ನು ಮಗಳಿಗೆ ಕೊಟ್ಟಿರುವಳಂತೆ.

ಪಿ.ವಿ. ಆಚಾರ್ಯ, ಬೆಂಗಳೂರು
*ಸ್ವಚ್ಛ ಭಾರತ್ ಅಭಿಯಾನ್ ಜಾರಿಗೆ ಬಂದರೆ ಚಿಂದಿ ಆಯುವವರ ಹಾಗೂ ಬೀದಿ ನಾಯಿಗಳ ಪಾಡೇನು?*
ಪ್ರಾಣಿದಯಾಸಂಘ ಚಿಂದಿ ಆಯುವವರನ್ನು ಶ್ವಾನ್ ರಕ್ಷಕ್ ದಲ್ ಆಗಿ ಪರಿವರ್ತಿಸಿ ಕೆಲಸ ಕೊಡುತ್ತದಂತೆ.

■ ರಾಮ್